# Evidence recorded through VC

## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಹೆಚ್.ಡಿ.ಕೋಟೆ

**ಸಿ.ಸಿ. ನಂ.513/09**

**ಸಿ.ಡಬ್ಲ್ಯೂ-7 ಪಿ.ಡಬ್ಲ್ಯೂ- 8**

| | | |
|---|---|---|
| ಸಾಕ್ಷಿದಾರರ ಹೆಸರು | : | ಜಯಪಾಲ್ |
| ತಂದೆಯ/ ಗಂಡನ ಹೆಸರು | : | ನಂಜಪ್ಪ |
| ವಯಸ್ಸು | : | 73 ವರ್ಷ |
| ಉದ್ಯೋಗ | : | ನಿವೃತ್ತ ಹೆಚ್ಚುವರಿ ವಾಣಿಜ್ಯ ಜಂಟಿ ತೆರಿಗೆ ಆಯುಕ್ತ |
| ವಾಸ ಸ್ಥಳ | : | ಮೈಸೂರು |

**ದಿನಾಂಕ 03.10.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು 2005 ರಿಂದ 2011 ರವರೆಗೂ ವಾಣಿಜ್ಯ ಜಂಟಿ ತೆರಿಗೆ ಆಯುಕ್ತರಾಗಿ ಮೈಸೂರು ವಲಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ22.06.2009 ರ ರಾತ್ರಿ ವಿರಾಜಪೇಟೆ, ಹುಣಸೂರು, ಹೆಚ್ ಡಿ ಕೋಟೆ, ಸರಗೂರು, ಗುಂಡ್ಲುಪೇಟೆ ಮಾರ್ಗವಾಗಿ ಚಾಸಾ 1 ರವರು ಮತ್ತು 4 ರವರನ್ನು ಗಸ್ತು ಕರ್ತವ್ಯಕ್ಕೆ ನಿಯೋಜಿಸಲಾಗಿದ್ದು, ಸದರಿ ದಿನ ರಾತ್ರಿ ಚಾಸಾ 1 ರವರು ಕಾರ್ಯ ನಿರ್ವಹಿಸುತ್ತಿದ್ದಾಗ ದಾಖಲೆಗಳು ಇಲ್ಲದೇ ಕರಿಮೆಣಸು ಸಾಗಾಣಿಕೆ ಮಾಡುತ್ತಿರುವುದು ಕಂಡು ಬಂದು ಕ್ರಮ ತೆಗೆದುಕೊಂಡು ಆರೋಪಿತರು ಗಲಾಟೆ ಮಾಡಿದ್ದಾರೆ ಎಂದು ಪೊಲೀಸ್ ಠಾಣೆಗೆ ದೂರು

ಕೊಟ್ಟಿರುತ್ತಾರೆ. ಸದರಿ ದಿನ ಚಾಸಾ 1 ಮತ್ತು 4 ರವರು ಕರ್ತವ್ಯ ನಿರ್ವಹಿಸಿದ ಬಗ್ಗೆ ಕರ್ತವ್ಯ ದೃಡೀಕರಣ ಪತ್ರ ನೀಡಿರುತ್ತೇನೆ. ಸದರಿ ದೃಡೀಕರಣ ಪತ್ರವನ್ನು ನಿಪಿ 16, ಸಾಕ್ಷಿ ಸಹಿಯನ್ನು ನಿಪಿ 16 (ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ  ಆರೋಪಿತರ ಪರ ವಕೀಲರಿಂದಃ**

ನಿಪಿ 16 ರಲ್ಲಿ ಚಾಸಾ 1 ಮತ್ತು 4 ರವರ ದೃಡೀಕರಣ ಪತ್ರ ನೀಡಿರುವ ಬಗ್ಗೆ ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಸಿಬ್ಬಂದಿಗಳಿಗೆ ಸಹಾಯ ಮಾಡಲು ಸುಳ್ಳು ದೃಡೀಕರಣ ಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಿನ ಚಾಸಾ 1 ಮತ್ತು 4 ರವರು ಕರ್ತವ್ಯಕ್ಕೆ ಹಾಜರಾಗಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು).

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ.ಕೋಟೆ.**